ವ್ಯವಸ್ಥೆ ಮಾಡಿದ್ದೇವೆ. 17ನೇ ತಾರೀಖು ಬೆಳಿಗ್ಗೆ ನಾನು ಹಂಪನಗೌಡರೊಂದಿಗೆ ದೂರವಾಣಿಯ ಮುಖಾಂತರ ಮಾತನಾಡಿದ್ದೇನೆ. ಅವರಿಂದಲೂ ಮಾಹಿತಿ ತೆಗೆದುಕೊಂಡ ಮೇಲೆ, ಜಿಲ್ಲಾಡಳಿತ ಸೂಕ್ತ ಕ್ರಮ ತೆಗೆದುಕೊಂಡಿದೆ. ನಾನಾಗಲೀ ಜಿಲ್ಲಾ ಉಸ್ತುವಾರಿ ಸಚಿವರಾಗಲೀ, ಆರೋಗ್ಯ ಮಂತ್ರಿಗಳಾಗಲೀ ಅಲ್ಲಿಗೆ ಹೋಗಿಲ್ಲ ಎಂದು ಅವರು ಆಪಾದನೆ ಮಾಡುತ್ತಿದ್ದಾರೆ. ಅದರ ಬಗ್ಗೆ ನಾವು ಈಗಾಗಲೇ ಮಾತನಾಡಿದ್ದೇವೆ. ನಾನು ಮತ್ತು ಆರೋಗ್ಯ ಮಂತ್ರಿಗಳು ಇವತ್ತು ರಾತ್ರಿಯೇ ಅಲ್ಲಿಗೆ ಹೋಗಿ ಅಲ್ಲಿ ಸಂಬಂಧಪಟ್ಟಂಥ ಎಲ್ಲರೊಂದಿಗೆ ಚರ್ಚಿಸಿ ಮುಂದೆ ಆ ಗ್ರಾಮಕ್ಕೆ ಯಾವುದೇ ರೀತಿಯ ತೊಂದರೆಯಾಗದ ಹಾಗೆ ನೋಡಿಕೊಳ್ಳುತ್ತೇವೆ. ಈಗ ಬಂದಿರುವ ವರದಿ ಪ್ರಕಾರ ಸುಮಾರು 13 ಜನ ಸತ್ತಿದ್ದಾರೆ. ಆದರಲ್ಲಿ 3-4 ಜನರಿಗೆ ಫೀವರ್ ಅಟ್ಯಾಕ್ ಆಗಿದೆ. 2-3 ಸಣ್ಣ ಹುಡುಗರಿಗೂ ಅಟ್ಯಾಕ್ ಆಗಿದೆ ಎನ್ನುವ ವರದಿ ಇದೆ. ಹೆಚ್ಚಿನ ಮಾಹಿತಿ ಆರೋಗ್ಯ ಸಚಿವರ ಹತ್ತಿರ ಇದೆ. ಇಂದೇ, ನಾನು ಮತ್ತು ಆರೋಗ್ಯ ಸಚಿವರು ಅಲ್ಲಿಗೆ ಹೋಗಿ, ಅಲ್ಲಿರತಕ್ಕಂಥ ಸಮಸ್ಯೆಗಳನ್ನು ಬಗೆಹರಿಸಲು ಕ್ರಮ ತೆಗೆದುಕೊಳ್ಳುತ್ತೇವೆ ಮತ್ತು ಇನ್ನು ಮುಂದೆ ಈ ರೀತಿ ಆಗದ ಹಾಗೆ ನೋಡಿಕೊಳ್ಳಲು ನಾವು ವ್ಯವಸ್ಥೆ ಮಾಡುತ್ತೇವೆ.

ಆ) ವಿಷಯ: ಮಂಡ್ಯ ನಗರದಲ್ಲಿ ವಿದ್ಯಾರ್ಥಿನಿಯ ನಿಗೂಢ ಸಾವು.

ಶ್ರೀ ಎಂ.ಎಸ್. ಆತ್ಮಾನಂದ(ಮಂಡ್ಯ): ಮಾನ್ಯ ಅಧ್ಯಕ್ಷರೇ, ಮಂಡ್ಯ ನಗರದಲ್ಲಿ ಕುಮಾರಿ ಆಶಾರಾಣಿ ಎನ್ನುವ ವಿದ್ಯಾರ್ಥಿನಿ ನಿಗೂಢವಾಗಿ ಸಾವನ್ನಪ್ಪಿದ್ದು ಅದು ಆತ್ಮಹತ್ಯೆಯೋ ಅಥವಾ ಕೊಲೆಯೋ ಎಂದು ಸಾರ್ವಜನಿಕರಲ್ಲಿ ಜಿಜ್ಞಾಸೆ ಹಾಗೂ ಸಂಶಯ ಮೂಡಿದ್ದು, ಅದರಿಂದ ಉಂಟಾಗಿರುವ ಪ್ರಕ್ಷುಬ್ಧ ವಾತಾವರಣವನ್ನು ನಾನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಇದರ ಸತ್ಯಾಸತ್ಯತೆಗಳನ್ನು ತಿಳಿಯಲು ಉನ್ನತವಾದ ಒಂದು ತನಿಖೆಯನ್ನು ಮಾಡಬೇಕು. ಅಲ್ಲಿ ಕಾನೂನು ವ್ಯವಸ್ಥೆಯನ್ನು ಕಾಪಾಡಲು ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ನಿವೇದನೆ ಮಾಡುತ್ತಿದ್ದೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ(ಕನಕಪುರ): ಮಾನ್ಯ ಅಧ್ಯಕ್ಷರೇ, ಮಂಡ್ಯ ಜಿಲ್ಲೆಯಲ್ಲಿ ನಡೆದಿರತಕ್ಕಂಥ ಘಟನೆಯಿಂದಾಗಿ ಅಲ್ಲಿ ಕಾನೂನಿನ ಸುವ್ಯವಸ್ಥೆಗೆ ಧಕ್ಕೆ ಬಂದಿದೆ. ಅಲ್ಲಿ ಪ್ರಕ್ಷುಬ್ಧ ಪರಿಸ್ಥಿತಿ ನಿರ್ಮಾಣವಾಗಿದೆ ಎನ್ನತಕ್ಕಂಥಾದ್ದು ಪತ್ರಿಕೆಗಳಲ್ಲಿ ವರದಿಯಾಗಿದೆ. ಅಲ್ಲಿ ನನಗೆ ಪರಿಚಯ ಇರುವವರ ಮೂಲಕವಾಗಿ ತಿಳಿದು ಬಂದ ಪ್ರಕಾರ, ಆ ಯುವತಿಯನ್ನು 3-4 ದಿನಗಳ ಹಿಂದೆ ಅಪಹರಣ ಮಾಡಿರತಕ್ಕಂಥ ವ್ಯಕ್ತಿಗಳು

ಪೋಲೀಸರ ಕುಟುಂಬಕ್ಕೆ ಸೇರಿದವರು. ಏಕೋ, ಏನೋ, ಮಂಡ್ಯದಲ್ಲಿ ಈ ರೀತಿಯ 2-3 ಘಟನೆಗಳು ನಡೆದಿವೆ. ಶ್ರೀರಂಗಪಟ್ಟಣದಲ್ಲಿ ಜೀತದಾಳುಗಳ ಪ್ರಕರಣ ನಡೆಯಿತು. ನಂತರ ಗೌಡಗೆರೆಯಲ್ಲಿ ಒಂದು ಪ್ರಕ್ಷುಬ್ದವಾದ ಪರಿಸ್ಥಿತಿ ಉಂಟಾಯಿತು. ಅಲ್ಲಿಗೆ ಶ್ರೀ ಚಂದ್ರೆಗೌಡರು ಹಾಗೂ ಮತ್ತೊಬ್ಬ ಮಂತ್ರಿಗಳು ಹೋಗಿ ಸಮಾಧಾನವನ್ನು ಹೇಳಿ ಬಂದರು. ಅದಾದನಂತರ ಯಡವನಹಳ್ಳಿಯಲ್ಲಿ ಸಹಿತ ಇದೇ ತರಹದ ಪ್ರಕರಣ ಆಯಿತು. ಸದರಿ ಪ್ರಕರಣದಲ್ಲಿ ಪೋಲೀಸರ ಮಕ್ಕಳೇ, ಕುಟುಂಬವರ್ಗದವರೇ ಈ ರೀತಿ ಹೋಗಿ ಆ ಯುವತಿ ಮೇಲೆ ಅತ್ಯಾಚಾರ ಮಾಡಿ ಆಕೆಯ ಹೆಣವನ್ನು ತೆಗೆದುಕೊಂಡು ಹೋಗಿ ಎಲ್ಲೋ ಹಾಕಿ, ಅದು ನಾಲ್ಕೈದು ದಿನಗಳ ನಂತರ ಪತ್ತೆಯಾಗಿದೆ ಎಂದು ಹೇಳಿದರೆ ಇದು ಪೊಲೀಸರ ಆಡಳಿತ ಯಾವ ರೀತಿ ಇದೆ ಎನ್ನುವುದರ ಬಗ್ಗೆ ಒಂದು ಕೈಗನ್ನಡಿ ಹಿಡಿದಂತೆ ಆಗುತ್ತದೆ. ಈ ಇಲಾಖೆಯ ಮೇಲೆ ಸರ್ಕಾರಕ್ಕೆ ಹಿಡಿತ ಇದೆಯೋ ಇಲ್ಲವೋ ಎನ್ನುವ ಪ್ರಶ್ನೆ ಸಹಿತ ಬರುತ್ತದೆ. ಮಂಡ್ಯ ಜಿಲ್ಲೆಯಲ್ಲಿ ಬೆಂಕಿ ಹತ್ತಿಕೊಂಡರೆ ಏನಾಗುತ್ತದೆ ಎನ್ನುವುದು ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಮಾನ್ಯ ಗೃಹಮಂತ್ರಿಗಳಿಗೆ ಸಹಿತ ಗೊತ್ತಿರತಕ್ಕಂಥ ವಿಚಾರವಾಗಿದೆ. ಅಲ್ಲಿ ಜನ ಜಮಾಯಿಸುತ್ತಿದ್ದಾರೆ, ಪ್ರತಿಭಟನೆ ಮಾಡುತ್ತಿದ್ದಾರೆ ಎನ್ನುವುದೂ ಸಹಿತ ಕೇಳಿಬರುತ್ತಿದೆ. ಪರಿಸ್ಥಿತಿ ಕೈಮೀರಿ ಹೋಗುವ ಮುನ್ನ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ? ಇವತ್ತಿನ ಪರಿಸ್ಥಿತಿ ಏನು? ಅಲ್ಲಿ ಶಾಂತಿ ಕಾಪಾಡುವ ಸಲುವಾಗಿ ಸರ್ಕಾರ ಏನೇನು ಕ್ರಮ ತೆಗೆದುಕೊಂಡಿದೆ ಎನ್ನುವುದನ್ನು ಈ ಸದನಕ್ಕೆ ತಿಳಿಸಬೇಕೆಂದು ನಾನು ತಮ್ಮ ಮೂಲಕ ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಜಗದೀಶ ಶೆಟ್ಟರ್(ವಿರೋಧಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಇದು ಬಹಳ ಮುಖ್ಯವಾದ ವಿಷಯ. ಇದು ಪೋಲೀಸ್ ಇಲಾಖೆಯಲ್ಲಿ ಕೆಲಸ ಮಾಡುವಂಥ ನೌಕರರ ಬೇರೆ ಬೇರೆ ಮಕ್ಕಳು ಕುಮಾರಿ ಆಶಾರಾಣಿ ಎನ್ನುವಂಥ ಪ್ರೌಢಶಾಲಾ ವಿದ್ಯಾರ್ಥಿನಿಯನ್ನು ಅಪಹರಣ ಮಾಡಿ ಅತ್ಯಾಚಾರ ಮಾಡಿದ್ದಾರೆ. ಮುಂದೆ ಸಂಶಯಾಸ್ಪದ ರೀತಿಯಲ್ಲಿ ಆಕೆಯ ಶವ ಬಾವಿಯಲ್ಲಿ ಸಿಕ್ಕಿದೆ. ಇವತ್ತು ಮಂಡ್ಯ ನಗರದ ಅಥವಾ ಇದರ ಬೇರೆ ಬೇರೆ ಭಾಗದಲ್ಲಿ ಇರಬಹುದು, ಈ ಒಂದು ಘಟನಾವಳಿಯಿಂದ ಬಹಳ ಉದ್ರಿಕ್ತವಾದಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಇದು ಮಾನ್ಯ ಮುಖ್ಯಮಂತ್ರಿಗಳು ಪ್ರತಿನಿಧಿಸತಕ್ಕಂಥ ಕ್ಷೇತ್ರ ಇರುವ ಜಿಲ್ಲೆಯಾಗಿದೆ. ಬಹುಶಃ ಮಾನ್ಯ ಮುಖ್ಯಮಂತ್ರಿಗಳ ಜಿಲ್ಲೆಯಲ್ಲಿಯೇ ಈ ರೀತಿಯಾದಂಥ ಘಟನಾವಳಿಗಳು ಪುನರಾವರ್ತನೆ ಆಗುತ್ತಿದೆ. ಅದರ ಬಗ್ಗೆ ಗಂಭೀರವಾದಂಥ ಚಿಂತನೆ ಮತ್ತು ಗಂಭೀರವಾದ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಮಂಡ್ಯ ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟು ಹೋಗಿದೆ. ಈ ಬಗ್ಗೆ 'ಹಾಯ್ ಬೆಂಗಳೂರು' ಪತ್ರಿಕೆಯಲ್ಲಿ ಕಳೆದ ಎರಡು ವಾರಗಳ ಹಿಂದೆ ಅಲ್ಲಿ ಏನು ನಡೆಯುತ್ತಿದೆ ಎನ್ನುವುದರ ಬಗ್ಗೆ ವರದಿ ಬಂದಿದೆ. ಅಂಥ ಪರಿಸ್ಥಿತಿ ಅಲ್ಲಿ ನಿರ್ಮಾಣವಾಗಿದೆ. ಆದಕಾರಣ ಮಾನ್ಯ ಮುಖ್ಯಮಂತ್ರಿಗಳ

ಜಿಲ್ಲೆಯಲ್ಲಿಯೇ ಈ ರೀತಿಯ ವಾತಾವರಣ ನಿರ್ಮಾಣವಾದರೆ ಇನ್ನು ರಾಜ್ಯದಲ್ಲಿ ಬೇರೆ ಜಿಲ್ಲೆಗಳಲ್ಲಿ ಯಾವ ರೀತಿ ಆಗಬಹುದು ಎನ್ನುವಂಥ ರಾಂಗ್ ಸಿಗ್ನಲ್ ರಾಜ್ಯದ ಜನರಿಗೆ ಹೋಗುತ್ತಿದೆ. ಆದ್ದರಿಂದ ಕುಮಾರಿ ಆಶಾರಾಣಿ ಎನ್ನುವಂಥ ಪ್ರೌಢಶಾಲಾ ವಿದ್ಯಾರ್ಥಿನಿ ಸಂಶಯಾಸ್ಪದ ರೀತಿಯಲ್ಲಿ ಸತ್ತಿದ್ದಾಳೆ, ಇದರ ಹಿಂದೆ ಯಾರು ಇದ್ದಾರೆ ಅವರನ್ನು ತಕ್ಷಣ ಬಂಧಿಸಬೇಕು ಮತ್ತು ಅವರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು, ಹಾಗೆಯೇ ಇದರ ಹಿನ್ನೆಲೆ ಏನು ಎನ್ನುವುದನ್ನೂ ಕೂಡ ಇನ್‌ವೆಸ್ಟಿಗೇಷನ್ ಮಾಡುವಂಥದ್ದು ಬಹಳ ಅವಶ್ಯಕತೆ ಇದೆ. ಈ ರೀತಿಯಾದಂಥ ಘಟನೆಗಳು ಪುನರಾವರ್ತನೆಯಾಗುತ್ತಿದ್ದರೆ ಕಾನೂನು ಸುವ್ಯವಸ್ಥೆ ಮೇಲೆ ಜನರಿಗೆ ನಂಬಿಕೆ ಹೋಗಲಿಕ್ಕೆ ಸಾಧ್ಯ ಇದೆ. ಆದ್ದರಿಂದ ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಗೃಹಮಂತ್ರಿಗಳು ತಕ್ಷಣ ಕ್ರಮವನ್ನು ಕೈಗೊಳ್ಳಬೇಕು ಮತ್ತು ಇಲ್ಲಿಯವರೆಗೆ ಏನು ಕ್ರಮ ತೆಗೆದುಕೊಂಡಿದ್ದಾರೆ ಎನ್ನುವುದರ ಬಗ್ಗೆ ಈ ಸದನಕ್ಕೆ ವಿವರಣೆ ನೀಡಬೇಕೆಂದು ತಮ್ಮ ಮೂಲಕ ನಾನು ಅವರಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಹೆಚ್.ಡಿ.ಚೌಡಯ್ಯ(ಕೆರಗೋಡು): ಮಾನ್ಯ ಅಧ್ಯಕ್ಷರೆ, ಅಸ್ವಾಭಾವಿಕ ಸಾವನ್ನಪ್ಪಿದ ಈ ಹೆಣ್ಣು ಮಗಳು ನನ್ನ ಕ್ಷೇತ್ರಕ್ಕೆ ಸೇರಿದಂಥ ಗ್ರಾಮದ ಹುಡುಗಿ. ಈ ಸಾವು ಮಂಡ್ಯ ಕ್ಷೇತ್ರದ ಪೋಲೀಸ್ ಕಾಲೋನಿಯಲ್ಲಿ ಆಗಿರುವಂಥಾದ್ದು. ಈ ಪೋಲೀಸ್ ಕಾಲೋನಿ ಏನಿದೆ ಅದರ ಹತ್ತಿರ ನಮ್ಮ ವಿದ್ಯಾಸಂಸ್ಥೆ ಇದ್ದು ಅಲ್ಲಿ ನಾನು ಕುಳಿತು ಕೆಲಸ ಮಾಡುತ್ತಿದ್ದೆ. ಅಂದರೆ ನಮ್ಮ ವಿದ್ಯಾಸಂಸ್ಥೆಯ ಹತ್ತಿರ ಇರುವುದೇ ಪೋಲೀಸ್‌ಕಾಲೋನಿ. ಈ ಬಗ್ಗೆ ನನ್ನ ಅನುಭವವನ್ನು ಹೇಳುತ್ತಿದ್ದೇನೆ. ಈ ರೀತಿ ಒಂದಲ್ಲ ಇಂಥ ಅನೇಕ ಕೃತ್ಯಗಳು ಆ ಪೋಲೀಸ್ ಕಾಲೋನಿಯಲ್ಲಿ ನಡೆಯುತ್ತಿವೆ. ಅದರ ಹೆಸರೇ ಪೋಲೀಸ್ ಕಾಲೋನಿ. ಇಲ್ಲಿ ಕಳ್ಳತನ, ದರೋಡೆ ಮುಂತಾದವು ನಡೆಯುತ್ತಲೇ ಇರುತ್ತವೆ. ನಾನು ಕಳೆದ ಹದಿನಾರು ವರ್ಷಗಳಿಂದ ಪೋಲೀಸರ ಮಕ್ಕಳೇ ಈ ತರಹ ಮಾಡುತ್ತಿದ್ದಾರಲ್ಲಾ ಇದು ಸರಿಯೇ ಎಂದು ಸಂಬಂಧಪಟ್ಟ ಎಸ್‌ಪಿ, ಡಿವೈಎಸ್‌ಪಿ ಹೀಗೆ ಎಲ್ಲಾ ಅಧಿಕಾರಿಗಳಿಗೂ ಹೇಳಿಕೊಂಡು ಬಂದಿದ್ದೇನೆ. ಈಗ ಮೂರು ಜನರನ್ನು ಏನು ಅರೆಸ್ಟ್ ಮಾಡಿದ್ದಾರೆ, ಅವರಿಗಿಂತ ಮುಖ್ಯವಾಗಿ ನಿಜವಾದಂಥ ಆರೋಪಿ ಯಾರು ಇದ್ದಾರೆ, ಆ ವ್ಯಕ್ತಿಯನ್ನು ಅರೆಸ್ಟ್ ಮಾಡಿಲ್ಲ. ಅವನನ್ನು ಕೂಡಲೇ ಅರೆಸ್ಟ್ ಮಾಡಬೇಕು. ಇನ್ನು ಆ ಶವವನ್ನು ರಾತ್ರಿ 11-30 ಗಂಟೆಯಲ್ಲಿ ಪೋಸ್ಟ್‌ಮಾರ್ಟಮ್ ಮಾಡಿದ್ದಾರೆ. ರಾತ್ರಿ 11-30 ಗಂಟೆಯಲ್ಲಿ ಪೋಸ್ಟ್‌ಮಾರ್ಟಮ್ ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶವಿದೆಯೇ ಎಂಬುದನ್ನು ಮಾನ್ಯ ಗೃಹಮಂತ್ರಿಗಳು ಹೇಳಬೇಕು ಮತ್ತು ನಮಗೆ ಬಂದಿರತಕ್ಕಂಥ ಸುದ್ದಿ ಪ್ರಕಾರ ಆ ಶವವನ್ನು ಊರಿಗೆ ಪೋಲೀಸರು ತೆಗೆದುಕೊಂಡು ಹೋಗಿದ್ದಾರೆ, ಆದರೆ ಅಲ್ಲಿ ಸಂಬಂಧಪಟ್ಟವರು ರಿಸೀವ್ ಮಾಡದೆ ವಾಪಸ್ಸು ಕಳುಹಿಸಿದ್ದಾರೆ. ಇವೆಲ್ಲವನ್ನು ಕೂಡ

ಪರಿಶೀಲನೆ ಮಾಡುವುದಕ್ಕೆ ಒಂದು ಉನ್ನತ ಮಟ್ಟದ ಎನ್‌ಕ್ವೈರಿ ಮಾಡುವುದು ಬಹಳ ಅವಶ್ಯಕ. ಇದು ಒಂದೇ ಅಲ್ಲ. ಇಂಥ ಸಣ್ಣಪುಟ್ಟ ಪ್ರಕರಣಗಳು ಹಿಂದೆ ನಡೆದಿರುವುದರಿಂದ ಮುಂದೆ ಈ ರೀತಿ ಆಗದಿರಬೇಕಾದರೆ ಉನ್ನತ ಮಟ್ಟದ ಎನ್‌ಕ್ವೈರಿ ಆಗಬೇಕಾಗಿರತಕ್ಕಂಥಾದ್ದು ಬಹಳ ಮುಖ್ಯ ಎನ್ನುವುದು ನನ್ನ ಅಭಿಪ್ರಾಯವಾಗಿದೆ.

ಶ್ರೀ ಎನ್. ಚೆಲುವರಾಯಸ್ವಾಮಿ(ನಾಗಮಂಗಲ): ಮಾನ್ಯ ಅಧ್ಯಕ್ಷರೆ, ನಿನ್ನೆಯ ದಿವಸ ಮಂಡ್ಯ ಜಿಲ್ಲೆಯಲ್ಲಿ ನಡೆದಿರತಕ್ಕಂಥ ಘಟನೆ ಕಳೆದ ಒಂದೂವರೆ ವರ್ಷದಿಂದ ಪದೇ ಪದೇ ಪುನರಾವರ್ತನೆ ಆಗುತ್ತಿರತಕ್ಕಂಥಾದ್ದು ಈ ಸದನದ ಗಮನಕ್ಕೆ ಬಂದಿದೆ. ಕುಮಾರಿ ಆಶಾರಾಣಿ ಎನ್ನುವ ಹುಡುಗಿ ಮಂಡ್ಯ ಸಿಟಿಯಲ್ಲಿ ವಿದ್ಯಾಭ್ಯಾಸ ಮಾಡಲಿಕ್ಕೆ ಅವಳ ಚಿಕ್ಕಪ್ಪನ ಮನೆಯಲ್ಲಿ ವಾಸ ಇದ್ದು, ಈ ಪೋಲೀಸ್ ಕಾಲೋನಿಯಲ್ಲಿನ ದಫೇದಾರ್‌ರ ಮಗನಾದ ಚೇತನ್‌ಕುಮಾರ್ ಎನ್ನುವವನು ಈ ಹುಡುಗಿಯನ್ನು ಅಪಹರಣ ಮಾಡಿ ಅತ್ಯಾಚಾರ ಮಾಡಿದ ಮೇಲೆ ಕೊಲೆಯಾಗಿದೆ ಎನ್ನುವ ವಿಚಾರವನ್ನು ನಾನು ಬೆಳಿಗ್ಗೆ ಫೋನ್ ಮಾಡಿ ಕೇಳಿದಾಗ ಅಲ್ಲಿಯ ಜನರು ಸ್ಪಷ್ಟವಾಗಿ ಈ ಮಾಹಿತಿಯನ್ನು ತಿಳಿಸಿದರು. ಪೋಲೀಸ್ ಅಧಿಕಾರಿಗಳ ಜೊತೆ ಫೋನ್ ಮಾಡಿ ಕೇಳಿದರೆ, ಇದು ಅತ್ಯಚಾರ ಅಲ್ಲ, ಇದು ಆತ್ಮಹತ್ಯೆ ಮಾಡಿಕೊಂಡಿದ್ದಾಳೆಂದು ಹೇಳುತ್ತಾರೆ. ಒಂದು ಶವದ ಶರೀರವನ್ನು ರಾತ್ರಿ 8 ಗಂಟೆಯಿಂದ ಬೆಳಿಗ್ಗೆ 6 ಗಂಟೆಯವರೆಗೆ ಪೋಸ್ಟ್‌ಮಾರ್ಟಮ್ ಮಾಡುವುದಿಲ್ಲವೆಂದು ಅಧಿಕಾರಿಗಳು ಹೇಳುತ್ತಾರೆ. ಆದರೆ ಈ ಶವವನ್ನು ರಾತ್ರಿ 11-00 ಘಂಟೆಯಲ್ಲಿ ಪೋಸ್ಟ್‌ಮಾರ್ಟಮ್ ಮಾಡಿ ಅದನ್ನು ಶಿವಳ್ಳಿಗೆ ತಲುಪಿಸಲಿಕ್ಕೆ ಹೋದಾಗ ಸಂಬಂಧಪಟ್ಟವರು ಅದನ್ನು ಪಡೆಯದಿರುವುದರಿಂದ ಹಾಗೆಯೇ ವಾಪಸ್ಸು ಬಂದಿರುವ ಸಂಗತಿ ತಿಳಿದುಬಂದಿದ್ದು, ಇದರಿಂದ ಮಂಡ್ಯ ಜಿಲ್ಲೆಯಲ್ಲಿ ಸಾವಿರಾರು ಜನರು ಸೇರಿ ಪ್ರತಿಭಟನೆ ಮಾಡುತ್ತಿರುವುದರಿಂದ ಅಲ್ಲಿ ಉದ್ರಿಕ್ತ ವಾತಾವರಣ ನಿರ್ಮಾಣವಾಗಿದೆ. ರಕ್ಷಣೆ ಮಾಡತಕ್ಕಂಥ ಪೊಲೀಸ್ ಇಲಾಖೆಯ ಅಧಿಕಾರಿಗಳ ನಿರ್ಲಕ್ಷತನದಿಂದಾಗಿ ಇಂಥ ಘಟನೆಗಳು ಪುನರಾವರ್ತನೆಯಾಗುತ್ತಿದ್ದರೆ ಇದಕ್ಕೆ ಕೊನೆಯೇ ಇಲ್ಲವೇ? ನಮ್ಮ ಜಿಲ್ಲೆಯವರೇ ಮುಖ್ಯಮಂತ್ರಿಯಾಗಿರುವುದರಿಂದ ಇದಕ್ಕೆ ವಿಶೇಷವಾದ ಕಾಳಜಿಯನ್ನು ಏಕೆ ವಹಿಸುತ್ತಿಲ್ಲ? 2-3 ತಿಂಗಳ ಹಿಂದೆ ಕುಮಾರಿ ಪ್ರತಿಭಾ ಎನ್ನುವ ಹುಡುಗಿಯ ಘಟನೆ ನೋಡಿದಾಗ ಇದನ್ನು ಎನ್‌ಕ್ವೈರಿ ಮಾಡುತ್ತೇವೆಂದು ಹೇಳಿ ಕೊನೆಗೆ ಅದೇ ಅಧಿಕಾರಿಗೆ ಪ್ರಮೋಷನ್ ಕೊಟ್ಟು ಒಳ್ಳೆಯ ಕಡೆ ಹಾಕಿ ಕೆಲಸ ಮಾಡಿಸುತ್ತಿದ್ದಾರೆ. ಇಂಥ ಘಟನೆಗಳಿಗೆ ಸರ್ಕಾರವೇ ಕುಮ್ಮಕ್ಕು ಕೊಟ್ಟು ಅಧಿಕಾರಿಗಳ ನಿರ್ಲಕ್ಷತನದಿಂದ ಇದೆಲ್ಲಾ ಆಗಿದೆ. ದಯವಿಟ್ಟು ಈ ಘಟನೆಗೆ ಸಂಬಂಧಪಟ್ಟಂತೆ ಇಲ್ಲಿಂದ ಯಾರಾದರೂ ಅಧಿಕಾರಿಗಳು, ಸರ್ಕಾರದಿಂದ ಮಂತ್ರಿಗಳು ಯಾರಾದರೂ ಹೋಗಿ ಇದನ್ನು ಸರಿಪಡಿಸಿ ಅವರಿಗೆ ನ್ಯಾಯ ದೊರಕಿಸಿಕೊಡಬೇಕು ಮತ್ತು ಆರೋಪಿಗಳ ಮೇಲೆ ಕಾನೂನಿನ ಕ್ರಮ

ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಬಿ.ಸೋಮಶೇಖರ್(ಮಳವಳ್ಳಿ): ಮಾನ್ಯ ಅಧ್ಯಕ್ಷರೆ, ನಿನ್ನೆಯ ದಿವಸ ಮಂಡ್ಯ ಜಿಲ್ಲೆಯಲ್ಲಿ ಒಬ್ಬ ಯುವತಿಯ ಮೇಲೆ ಅತ್ಯಾಚಾರ,ಕೊಲೆ ಅಥವಾ ಅಸ್ವಾಭಾವಿಕ ಮರಣ ಏನಾಗಿದೆ ಇದು ನಿಜವಾಗಿಯೂ ಬಹಳ ದುಃಖಕರವಾದ ಸಂಗತಿಯಾಗಿದೆ. 2-3 ಕಾರಣಗಳಿಂದ ಬಹಳ ಸೂಕ್ಷ್ಮವಾಗಿರತಕ್ಕಂಥ ಜಿಲ್ಲೆ. ಇಲ್ಲಿ ಸುಮಾರು ಒಂದೂವರೆ ವರ್ಷಗಳಿಂದ ಅನೇಕ ಘಟನೆಗಳು ನಡೆದಿವೆ. ಯಡವನಹಳ್ಳಿ ಘಟನೆ ಇರಬಹುದು, ಗೌಡಗೆರೆಯಲ್ಲಿ ಪ್ರತಿಭಾ ಎನ್ನುವ ಹುಡುಗಿಯ ಘಟನೆ ಇರಬಹುದು, ಬೂಕನಗೆರೆ ಘಟನೆ ಇರಬಹುದು, ಇವೆಲ್ಲಾ ಏನು ತೋರಿಸುತ್ತದೆ ಎಂದರೆ ಮಂಡ್ಯ ಜಿಲ್ಲೆಯೊಳಗೆ ಶಾಂತಿ ನೆಲೆಸುವುದರಲ್ಲಿ ಸ್ವಲ್ಪ ಎಡರುತೊಡರುಗಳು ಆಗಿವೆ, ಆಡಳಿತ ವೈಪಲ್ಯವಾಗಿದೆ, ಕಾನೂನಿನ ಸುವ್ಯವಸ್ಥೆ ಹದಗೆಟ್ಟಿದೆ ಎನ್ನುವುದನ್ನು ನಾವು ಇಲ್ಲಿ ಸ್ಪಷ್ಟವಾಗಿ ಕಾಣುತ್ತೇವೆ. ದುರ್ದೈವ ವಶಾತ್ ಇದು ಮಾನ್ಯ ಮುಖ್ಯಮಂತ್ರಿಗಳ ಜಿಲ್ಲೆಯಲ್ಲಿಯೇ ಆಗಿರುವಂಥಾದ್ದು ಎಂತಹವರಿಗೂ ನೋವು ತರತಕ್ಕಂಥ ವಿಚಾರವಾಗಿದೆ. ನ್ಯಾಯವಾಗಿ ಆ ಜಿಲ್ಲೆಯಲ್ಲಿಯೇ ಆಡಳಿತದಲ್ಲಿ ಬಿಗಿ ಇರಬೇಕಾಗಿತ್ತು. ನಮ್ಮ ಹಿರಿಯ ಸದಸ್ಯರಾದಂಥ ಶ್ರೀ ಚೌಡಯ್ಯನವರು ಹೇಳಿದ ಹಾಗೆ ಪೋಲೀಸ್ ಕಾಲೋನಿಯಲ್ಲಿ ಏನು ನಡೆದಿದೆ ಇದು ಪೋಲೀಸ್ ಅಧಿಕಾರಿಗಳ ಕುಮ್ಮಕ್ಕಿನಿಂದ ನಡೆದಿದೆ ಎನ್ನುವ ಅನುಮಾನ ಬರುತ್ತಿದೆ. ಮತ್ತೊಂದು ವಿಚಾರವೆಂದರೆ, ಇದು ದಲಿತ ಹುಡುಗರಿಂದ ಆಗಿದೆ ಎನ್ನುವಂಥ ಒಂದು ವರದಿ ಬಂದಿದೆ. ಇದು ಬಹಳ ದುರ್ದೈವದ ವಿಚಾರ. ಇಂಥ ಪ್ರಚಾರಗಳು ಆದರೆ ರಾಜ್ಯದಲ್ಲಿ ಬಹಳ ಕೆಟ್ಟ ಪರಿಣಾಮ ಆಗತಕ್ಕಂಥ ಪರಿಸ್ಥಿತಿ ಇದೆ. ಇದರಿಂದ ಮತೀಯ ಗಲಭೆ ಆಗತಕ್ಕಂಥ ಪರಿಸ್ಥಿತಿ ಉಂಟು. ಈ ತಕ್ಷಣ ಮಾನ್ಯ ಗೃಹಸಚಿವರು ಅಲ್ಲಿಗೆ ಹೋಗಬೇಕು. ಸಿ.ಒ.ಡಿ. ಎನ್‌ಕ್ವೈರಿ ಮಾಡಿ ಎಂದು ನಾನು ಕೇಳುವುದಿಲ್ಲ. ಏಕೆಂದರೆ ಅದರಲ್ಲಿ ಪೋಲೀಸ್ ಇಲಾಖೆಯವರು ಶಾಮೀಲು ಆಗಿದ್ದಾರೆಂದು ಹೇಳುತ್ತಿರುವುದರಿಂದ ಅವರಿಂದ ನ್ಯಾಯವಾದ ತನಿಖೆ ಆಗುವುದಿಲ್ಲ ಎನ್ನುವ ಸಂಶಯ ನಮಗೆ ಇದೆ. ಆದ್ದರಿಂದ ಮ್ಯಾಜಿಸ್ಟ್ರೇಟ್‌ರವರಿಂದ ತಾವು ಎನ್‌ಕ್ವೈರಿ ಮಾಡಿಸಬೇಕು ಮತ್ತು ಆ ಹುಡುಗಿ ಕಡೆಯವರಿಗೆ ಪರಿಹಾರ ಕೊಡಬೇಕು ಇನ್ನು ಮಂಡ್ಯ ಜಿಲ್ಲೆಯಲ್ಲಿ ಪೋಲೀಸ್ ಇಲಾಖೆಯ ಆಡಳಿತ ಸಂಪೂರ್ಣ ಹದಗೆಟ್ಟಿದೆ. ಕೆಲವು ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ಗಳು ಬಹಳ ಹದಗೆಟ್ಟಿವೆ. ಮೊನ್ನೆ ಮಳವಳ್ಳಿ ತಾಲ್ಲೂಕಿನಲ್ಲಿ ಆದಂಥ ಒಂದು ಘಟನೆ ಬಗ್ಗೆ ಈ ಸಂದರ್ಭದಲ್ಲಿ ಹೇಳಲಿಕ್ಕೆ ನಾನು ಇಷ್ಟಪಡುತ್ತೇನೆ. ನಮ್ಮ ಪಕ್ಷದ ಒಬ್ಬ ತಾಲ್ಲೂಕು ಪಂಚಾಯತಿ ಸದಸ್ಯರಿಗೆ ಒಬ್ಬ ಎಕ್ಸಿಕ್ಯೂಟಿವ್ ಅಧಿಕಾರಿ ಹೊಡೆಯುವುದಕ್ಕೆ ಹೋಗುತ್ತಾನೆ ಎಂದು ಹೇಳಿದರೆ, ಎಷ್ಟರಮಟ್ಟಿಗೆ ಆಡಳಿತ ವ್ಯವಸ್ತೆ ನಡೆಯುತ್ತಿದೆ ಎನ್ನುವುದನ್ನು ನೋಡಬಹುದು. ಆ ಅಧಿಕಾರಿ ಕಪಾಳಕ್ಕೆ ಹೊಡೆಯುವುದಕ್ಕೆ ಹೋಗಿದ್ದ, ಇದು ನಿಜ. ಇದು ಪೇಪರ್‌ನಲ್ಲಿ

ಕೂಡ ಬಂದಿದೆ. ಆದ್ದರಿಂದ ಪೋಲೀಸ್ ಇಲಾಖೆಗಾಗಲಿ ಅಥವಾ ಬೇರೆ ಇಲಾಖೆಗಾಗಲಿ ಇಂಥ ಅಧಿಕಾರಿಗಳನ್ನೇ ಹಾಕಿ ಎಂದು ಹೇಳುವುದಿಲ್ಲ, ಸ್ವಲ್ಪ ಪ್ರಾಮಾಣಿಕತೆ ಇರತಕ್ಕಂಥ ಅಧಿಕಾರಿಗಳನ್ನು ಹುಡುಕಿ ಹಾಕಿದರೆ ಒಳ್ಳೆಯದೆಂದು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ.

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ(ಗೃಹಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಈಗಾಗಲೇ ಶ್ರೀಯುತರುಗಳಾದ ಸಿಂಧ್ಯಾರವರು, ಜಗದೀಶ ಶೆಟ್ಟರ್‌ರವರು, ಸೋಮಶೇಖರ್‌ರವರು ಮತ್ತು ಆ ಮತಕ್ಷೇತ್ರದ ಶಾಸಕರು ಹಾಗೂ ನೆಲಮಂಗಲದ ಶಾಸಕರು ಕೂಡ ಈ ಆಶಾರಾಣಿ ಎನ್ನುವ ಪ್ರೌಢ ಶಾಲಾ ವಿದ್ಯಾರ್ಥಿನಿಯ ನಿಧನದ ಬಗೆ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಯಾವ ಸಂದರ್ಭದಲ್ಲಿ ಆ ಘಟನೆ ನಡೆದಿದೆ ಎನ್ನುವ ಬಗ್ಗೆ ವಿವರವಾದ ಮಾಹಿತಿಯನ್ನು ನಾವು ತರಿಸಿಕೊಳ್ಳುತ್ತೇವೆ. ಟೆಲಿಫೋನ್ ಮೂಲಕ ಈಗಾಗಲೇ ಕೆಲವು ಮಾಹಿತಿಗಳನ್ನು ನಾನು ಪಡೆದುಕೊಂಡಿದ್ದೇನೆ. ಆದರೆ, ನಾನು ವಿವರವಾದ ವರದಿಯನ್ನು ತರಿಸಿಕೊಳ್ಳುತ್ತಿದ್ದೇನೆ. ಪೋಲೀಸ್ ಕಾಲೋನಿಯಲ್ಲಿ ಇಂಥ ಒಂದು ಘಟನೆ ನಡೆದಿದೆ, ಇದು ಹತ್ತಾರು ವರ್ಷಗಳಿಂದ ನಡೆಯುತ್ತಿದೆ, ನಾನು ನೋಡಿದ್ದೇನೆಂದು ಹೇಳಿ ಶ್ರೀ ಹೆಚ್.ಡಿ.ಚೌಡಯ್ಯನವರು ಈಗಾಗಲೇ ಸದನದಲ್ಲಿ ಪ್ರಸ್ತಾಪಿಸಿದ್ದಾರೆ. ಆದರೆ, ಸರ್ಕಾರ ವಿಫಲವಾಗಿದೆ ಅಥವಾ ಕಾನೂನು ವ್ಯವಸ್ಥೆ ಕೆಟ್ಟು ಹೋಗಿದೆ, ಅದಕ್ಕೇ ಹೀಗಾಗಿದೆ ಎಂದು ಹೇಳಿ ತಾವು ಹೇಳಿದರೆ ಅದು ಸತ್ಯಕ್ಕೆ ದೂರವಾದ ಮಾತು. ಇದು ಸಹಜವಾಗಿ, ಅಲ್ಲಿನ ಹೈಸ್ಕೂಲಿನ ವಿದ್ಯಾರ್ಥಿಗಳು ಓದುವಾಗ, ಅದೇ ಹೈಸ್ಕೂಲಿನ ವಿದ್ಯಾರ್ಥಿಗಳು ಫ್ರೆಂಡ್‌ಷಿಪ್‌ನಲ್ಲಿ ಒಬ್ಬರಿಗೊಬ್ಬರು ತಮ್ಮ ಪ್ರೀತಿ-ವಿಶ್ವಾಸದಲ್ಲಿ ನಡೆದುಕೊಂಡು ಹೋಗುವಾಗ ನಡೆದ ಘಟನೆಯಿದು. ಏನಾಯಿತು? ಏಕಾಯಿತು? ಯಾರ ತಪ್ಪಿದೆ? ಅಥವಾ ಅವರಿಬ್ಬರೂ ಪ್ರೀತಿಸುತ್ತಿದ್ದರೆ? ಆ ಹುಡುಗಿ ಮೇಲೆ ಅತ್ಯಾಚಾರವಾಯಿತೋ? ಎಂಬ ಬಗ್ಗೆ ತಿಳಿಯಬೇಕಾಗಿದೆ. 4-5 ಹುಡುಗರು ಅವಳನ್ನು ಬಲಾತ್ಕಾರ ಮಾಡಿದ್ದಾರೆಂದು ತಾವು ಹೇಳಿದಿರಿ. ಆದರೆ, ಅವರು 15 ವರ್ಷಗಳೊಳಗಿನವರಾಗಿದ್ದು, ಮೈನರ್ಸ್ ಇದ್ದು, ಒಬ್ಬರಿಗೊಬ್ಬರು ಪ್ರೀತಿಸುತ್ತಿದ್ದರೆಂದು ನಮಗೆ ವರದಿ ಬಂದಿದೆ. ಯಾವ ವರದಿ ಸರಿ ಎನ್ನುವ ಬಗ್ಗೆ ಡೀಟೇಲ್ ಆದ ವರದಿಯನ್ನು ನಾನು ತರಿಸಿಕೊಳ್ಳುತ್ತೇನೆ. ಅದಾದ ಮೇಲೆ, ಅದು ಸೂಯಿಸೈಡೋ ಅಥವಾ ಅನ್-ನ್ಯಾಚುರಲ್ ಡೆತ್ತೋ ಅಥವಾ ಮರ್ಡರೋ? ಎನ್ನುವ ಬಗ್ಗೆ ವರದಿ ಬರುತ್ತದೆ. ಪೋಸ್ಟ್‌ಮಾರ್ಟಂ ಮಾಡಿಸಿದ್ದು, ಅದರ ವರದಿ ಕೂಡ ಬರುತ್ತದೆ. ಆ ವರದಿ ಬಂದ ಮೇಲೆ ನಾನು ಸ್ಟೇಟ್‌ಮೆಂಟ್ ಮಾಡುತ್ತೇನೆ. ಎರಡನೆಯದಾಗಿ, ಸ್ಥಳೀಯ ಶಾಸಕರಾದ ಶ್ರೀ ಹೆಚ್.ಡಿ.ಚೌಡಯ್ಯ ಮತ್ತು ಶ್ರೀ ಎಂ.ಎಸ್.ಆತ್ಮಾನಂದರವರು, ಎಲ್ಲರಲ್ಲೂ ನಾನು ಮನವಿ ಮಾಡಿಕೊಳ್ಳುವುದೇನೆಂದರೆ, ಕೆಲವು ಕಡೆ ಸಾಮಾಜಿಕವಾಗಿ ಕೂಡ ಕೆಲವು ಘರ್ಷಣೆಗಳು ನಡೆಯುತ್ತವೆ. ಇದನ್ನು ನಾವು ಅಲ್ಲಗಳೆಯುವಂಥದ್ದಲ್ಲ. ಗೌಡಗೆರೆ

ಇಷ್ಟೂ ಇರಬಹುದು. ಅದಕ್ಕೆಷ್ಟು ಸ್ವರೂಪ ಕೊಟ್ಟರು, ಎಷ್ಟು ಪ್ರಚಾರ ಕೊಟ್ಟರೆಂಬುದು ಗೊತ್ತಿದೆ. ಹಾಗಾದರೆ, ಇಡೀ ಪ್ರಪಂಚದಲ್ಲಿ, ಇಡೀ ರಾಜ್ಯದಲ್ಲಿ ಇಂಥ ಘಟನೆಗಳು ನಡೆಯುವುದೇ ಇಲ್ಲವೇ? ಇದೂ ಕೂಡ ವಿದ್ಯಾರ್ಥಿಗಳ ನಡುವೆ ನಡೆದ ಘಟನೆ. ಅನೇಕರು ಒಬ್ಬರಿಗೊಬ್ಬರು ಪತ್ರ ಬರೆಯುವುದು, ಪ್ರೀತಿಸುವುದು, ಎಷ್ಟೋ ಕಡೆ ನಡೆದ ಘಟನೆಗಳಿವೆ. ಹಾಗೆಯೇ, ಇಲ್ಲೂ ಸಹ ನಡೆದಿರಬಹುದು. ಅದನ್ನು ನಾನು ಸಮರ್ಥನೆ ಮಾಡಿಕೊಳ್ಳುತ್ತೇನೆಂದಲ್ಲ. ಆದರೆ, ಸಮಾಜದಲ್ಲಿ ಬೇರೆ ಬೇರೆ ಎರಡು ಜಾತಿಗಳ ನಡುವೆ ನಡೆದ ಘಟನೆಗಳಿಗೆ ತಕ್ಷಣವೇ ಬೇರೆ ಲಾ ಅಂಡ್ ಆರ್ಡರ್ ಕಲರ್ ಕೊಡುವುದು, ಅದಕ್ಕೊಂದು ಜಾತಿ ಬಣ್ಣ ಹಚ್ಚಿ ಎಬ್ಬಿಸುವುದು, ಪ್ರಚೋದನೆ ಮಾಡುವುದು, ಇದನ್ನು ನಾವ್ಯಾರೂ ಕೂಡ ಮಾಡುವುದು ಬೇಡವೆಂದು ಹೇಳಿ ನಾವು-ನೀವೆಲ್ಲರೂ, ಅಲ್ಲಿರುವವರಿಗೆ ಅಪೀಲ್ ಮಾಡುವುದು ಬಹಳ ಮುಖ್ಯ. ಏಕೆಂದರೆ, ಏನಾದರೂ ಸಣ್ಣ ಘಟನೆಗಳಾದರೆ ಕೂಡಲೇ ರಸ್ತೆ ಬ್ಲಾಕ್ ಮಾಡುತ್ತಾರೆ. ಶಿವಳ್ಳಿಯಲ್ಲಿನ ಪೋಲೀಸ್ ಸ್ಟೇಷನ್‌ನಲ್ಲಿ ಎಸ್.ಪಿ.ಯವರು, ಡಿಸಿಯವರು ಇದ್ದಾರೆ. ಈಗ ಹೆಣ ಆ ಪೋಲೀಸ್ ಸ್ಟೇಷನ್‌ನಲ್ಲಿಯೇ ಇದೆ. ಆದರೆ, ಅಲ್ಲೇನಾದರೂ ಹೇಳಲು ಜನರು ಮುಂದೆ ಬರುತ್ತಿಲ್ಲ. ಏಕೆಂದರೆ, ಕೆಲವರು ಏನಾದರೂ ಹೇಳಲು ಹೋದರೆ ಹೀಗಾಗುತ್ತದೆ, ಸ್ಟೇಟ್‌ಮೆಂಟ್ ಕೊಡಬೇಡಿ, ಅವರೇನು ಮಾಡುತ್ತಾರೋ ನೋಡೋಣ ಎಂದು ಹೇಳಿ ಪ್ರಚೋದನೆ ಮಾಡುವವರಿದ್ದಾರೆ. ಅದಕ್ಕೆ ಇದು ಸೂಕ್ಷ್ಮವಾದ ವಿಚಾರವಾಗಿರುವುದರಿಂದ ನಾನೇನಾದರೂ ಹೆಚ್ಚು ಕಡಿಮೆ ಮಾತನಾಡಿದರೆ ಒಂದಕ್ಕೆರಡು ಅರ್ಥ ಮಾಡುವ ಜನರಿದ್ದಾರೆ. ಅದಕ್ಕೆ, ನಾನು ಆ ಗೋಜಿಗೆ ಹೋಗುವುದಿಲ್ಲ. ಇಂಪಾರ್ಷಿಯಲ್ ಎನ್‌ಕ್ವೈರಿಯನ್ನು ನಾವು ಮಾಡಿಸುತ್ತೇವೆ. ಉನ್ನತ ಮಟ್ಟದ ತನಿಖೆ ಮಾಡಬೇಕೆಂದು ಹೇಳುತ್ತಿದ್ದಾರೆ. ಡಿವಿಜನಲ್ ಕಮಿಷನರ್‌ರಿಂದ, ಡಿಸಿಪಿಯವರಿಂದ ಅಥವಾ ಸಿಓಡಿ ತನಿಖೆ ಬೇಕಾದರೆ ಮಾಡಿಸುತ್ತೇವೆ. ನಾವು ಅದರಲ್ಲೇನೂ ಮುಚ್ಚುಮರೆ ಮಾಡುವುದಿಲ್ಲ. ಅದರಲ್ಲಿ ಯಾರೇ ತಪ್ಪು ಮಾಡಿರಲಿ, ಅವರಿಗೆ ರಕ್ಷಣೆ ಕೊಡುವುದು, ಪಿಸಿ, ಹೆಚ್‌ಸಿ ಅಥವಾ ಯಾರ ಮಕ್ಕಳೇ ಇರಬಹುದು, ಯಾರಿಗೆ ಕಾನೂನು ಪ್ರಕಾರ ಯಾವ ಶಿಕ್ಷೆಯಾಗಬೇಕೋ, ಆ ರೀತಿಯ ಶಿಕ್ಷೆ ಕೊಡಿಸುವುದಕ್ಕೆ ನಾವು ಸಿದ್ಧರಿದ್ದೇವೆ. ಎನ್‌ಕ್ವೈರಿ ರಿಪೋರ್ಟ್ ತರಿಸಿಕೊಂಡು ಮುಂದಿನ ಕ್ರಮ ಜರುಗಿಸುತ್ತೇವೆ. ಅಲ್ಲಿನ ವಾತಾವರಣವನ್ನು ತಿಳಿ ಮಾಡುವುದಕ್ಕೆ ನಾವೆಲ್ಲರೂ ಪ್ರಯತ್ನಿಸೋಣ. ನಾನು ಈ ಸದನದ ಮೂಲಕ ಅಪೀಲ್ ಮಾಡುವುದೇನೆಂದರೆ, ಅಲ್ಲಿರುವ ಯಾರೇ ಮುಖಂಡರು ಇದಕ್ಕೆ ಪ್ರಚೋದನೆ ಮಾಡುವವರಾಗಲಿ ಅಥವ ಸಹಾಯ ಮಾಡಬೇಕೆಂದು ಬಂದಂಥವರಾಗಲೀ, ಅವರೆಲ್ಲರೂ ಸ್ವಲ್ಪ ಅಲ್ಲಿನ ವಾತಾವರಣವನ್ನು ತಿಳಿಗೊಳಿಸಿ ಎಂದು ಕೇಳುತ್ತೇನೆ. ಆ ಹುಡುಗಿ ಸತ್ತಿರುವುದು ಯಾರಿಗೂ ಸಂತೋಷವನ್ನುಂಟು ಮಾಡುವ ಸಂಗತಿಯಲ್ಲ. ನಡೆಯಲಾರದ ಘಟನೆ ನಡೆದಿದೆ. ಅದಕ್ಕೆ ಇವತ್ತು ಆ

ಸಿಚುಯೇಷನನ್ನು ಹೇಗೆ ನಿಭಾಯಿಸಬೇಕು? ಅದಕ್ಕೆ ಎಲ್ಲರೂ ಅದನ್ನು ಸರಿಯಾದ ರೀತಿಯಲ್ಲಿ ನಿಭಾಯಿಸಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಸೂಕ್ತವಾದ ಕಾನೂನು ಕ್ರಮ ಜರುಗಿಸುವುದಕ್ಕೆ ಈ ಸರ್ಕಾರ ಸದಾ ಸಿದ್ಧವಿದೆ. ಯಾರೇ ಆಗಲಿ ಕಾನೂನನ್ನು ಮುರಿಯುವ ಪ್ರಯತ್ನ ಮಾಡಿದರೆ, ಅದನ್ನು ಈ ಸರ್ಕಾರ ಸಹಿಸುವುದಿಲ್ಲವೆಂಬ ಮಾತನ್ನು ಸ್ಪಷ್ಟವಾಗಿ ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಕೆಲವರಿಗೆ ಏನಾಗಿದೆಯೆಂದರೆ, ಸಣ್ಣ ಪುಟ್ಟ ವಿಷಯಗಳನ್ನು ಹೈಲೈಟ್ ಮಾಡುವುದು ಮತ್ತು ಅದಕ್ಕೆ ಪ್ರಚೋದನೆ ಮಾಡುವುದು ಮತ್ತು ಅದು ಸಮಾಜದ ಮೇಲೆ ಯಾವ ರೀತಿಯ ಪರಿಣಾಮ ಬೀರುತ್ತದೆಂಬ ಅರಿವೂ ಇಲ್ಲದೆ ಹೊರಗಡೆ ಮಾತನಾಡುವವರಿದ್ದಾರೆ. ಅದಕ್ಕೆ ಈ ವಿಷಯವನ್ನು ತಾವು ಪ್ರಸ್ತಾಪಿಸಿದ್ದೀರಿ, ಆ ವಿಷಯ ಏನಿದೆ ಎಂದು ತಿಳಿಯಬೇಕೆಂಬ ದೃಷ್ಟಿಯಿಂದ ತಾವು ಹೇಳಿದಿರಿ, ನಾನು ಆ ವಿಷಯದ ಬಗ್ಗೆ ಸವಿಸ್ತಾರವಾದ ವರದಿ ತರಿಸಿಕೊಂಡು ಪುನಃ ಒಮ್ಮೆ ಬೇಕಾದರೆ ಈ ಸದನದಲ್ಲಿ ಡೀಟೇಲ್ ಸ್ಟೇಟ್‌ಮೆಂಟ್ ಮಾಡುತ್ತೇನೆ.

ಶ್ರೀ ಕೆ.ಎಂ.ಕೃಷ್ಣಮೂರ್ತಿ: ಸಣ್ಣಪುಟ್ಟ ಘಟನೆಗಳನ್ನು ದೊಡ್ಡದು ಮಾಡಬೇಕೆಂಬ ಉದ್ದೇಶ ನಮ್ಮದಲ್ಲ. ರಾತ್ರಿ 12 ಗಂಟೆಯಲ್ಲಿ ಪೋಸ್ಟ್‌ಮಾರ್ಟಂ ಮಾಡುವ ಉದ್ದೇಶವೇನು? ಸರ್ಕಾರದ ನಿಯಮದಲ್ಲೇನಿದೆ?

ಅಧ್ಯಕ್ಷರು: ಡೀಟೇಲ್ಸ್ ತರಿಸುತ್ತೇವೆಂದು ಹೇಳುತ್ತಿದ್ದಾರೆ.

ಶ್ರೀ ಎನ್.ಚಲುವರಾಯ ಸ್ವಾಮಿ: ಗೃಹ ಸಚಿವರು, ಪ್ರಚೋದನೆ ಎಂದು ತಿಳಿಸಿದರು. ಪ್ರತಿಭಾ ಘಟನೆಯಾಗಲೀ, ಅಶಾರಾಣಿ ಘಟನೆಯಾಗಲೀ, ಮಂಡ್ಯ ಜಿಲ್ಲೆಯಲ್ಲಿ ಇಂಥ ಘಟನೆಗಳು ನಡೆದಾಗ, ವಿರೋಧ ಪಕ್ಷದವರಾಗಲೀ, ಸಾರ್ವಜನಿಕರಾಗಲೀ ಪ್ರಚೋದನೆ ಮಾಡಿದ್ದಾರೆಂದು ಅವರು ಹೇಳಲಿ. ಯಾವುದೇ ಕಾರಣಕ್ಕೂ ಸರ್ಕಾರ ಅಧಿಕಾರ ವಹಿಸಿಕೊಂಡ ಒಂದೂವರೆ ವರ್ಷಗಳಲ್ಲಿ ಯಾವುದೇ ಘಟನೆ ನಡೆದರೂ, ಎಲ್ಲಾ ಹಂತದಲ್ಲಿಯೂ ಸಹಕಾರ ಕೊಟ್ಟಿದ್ದೇವೆ. ಇವತ್ತು ಪರಿಹಾರವನ್ನು ಅವರು ಅನೌನ್ಸ್ ಮಾಡಿಲ್ಲ. ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಪ್ರಚೋದನೆ ಮಾಡುವವರಿರಬಹುದು, ಸಹಾಯ ಮಾಡುವವರೂ ಇರಬಹುದೆಂದು ನಾನು ಹೇಳಿದ್ದೇನೆ.

ಅಧ್ಯಕ್ಷರು: ರಿಪೋರ್ಟ್ ತರಿಸಿಕೊಂಡು, ಏರ್ಪಾಟು ಮಾಡುತ್ತೇನೆಂದಿದ್ದಾರೆ.

ಶ್ರೀ ಸಿ.ಬಿ.ಸುರೇಶ್‌ಬಾಬು: ಆ ಹುಡುಗಿ ಕಿಡ್ನಾಪ್ ಆದ ಬಗ್ಗೆ ಕೇಸ್ ದಾಖಲು ಮಾಡಲು ಹೋದಾಗ, ಕೇಸ್ ದಾಖಲು ಮಾಡಿಕೊಂಡಿಲ್ಲ. ದಯವಿಟ್ಟು ಗೃಹಸಚಿವರು

ಆ ಕೇಸ್ ಬಗ್ಗೆ ಪೋಲೀಸ್ ಎನ್‌ಕ್ವೈರಿ ಬೇಡ, ಕಾನೂನು ಎನ್‌ಕ್ವೈರಿ ಮಾಡಿಸಬೇಕೆಂದು ಕೇಳುತ್ತೇನೆ.

ಇ) ವಿಷಯ: ಮಹದೇಶ್ವರ ಸಕ್ಕರೆ ಕಾರ್ಖಾನೆಗೆ ಸಂಬಂಧಪಟ್ಟ ವಿಚಾರದಲ್ಲಿ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲು ಬೆಂಗಳೂರಿಗೆ ಬರುತ್ತಿದ್ದ ರೈತರನ್ನು ಬಂಧಿಸಿ ಪೋಲೀಸ್ ಸ್ಟೇಷನ್‌ನಲ್ಲಿಟ್ಟಿರುವುದರ ಬಗ್ಗೆ.

ಶ್ರೀ ಗುರುಸ್ವಾಮಿ(ಚಾಮರಾಜನಗರ): ಚಾಮರಾಜನಗರ ಜಿಲ್ಲೆಯಿಂದ ಎರಡು ಬಸ್ಸುಗಳಲ್ಲಿ ಇಂದು ಬೆಳಗಿನ ಜಾವ 200 ಜನ ರೈತರು 8 ಕೋಟಿ ರೂಪಾಯಿಗಳು ಬಾಕಿ ಇರುವ ಬಗ್ಗೆ ಮನವಿ ಮಾಡಲು ಮುಖ್ಯಮಂತ್ರಿಗಳನ್ನು ಭೇಟಿ ಮಾಡಬೇಕೆಂದು ಬರುವ ಸಮಯದಲ್ಲಿ ಪೋಲೀಸರು ರಾಮನಗರದಲ್ಲಿ ಅವರನ್ನು ತಡೆದು ಪೋಲೀಸ್ ಸ್ಟೇಷನ್‌ನಲ್ಲಿಟ್ಟಿದ್ದಾರೆ. ನಾನು ಮತ್ತು ಜಗದೀಶ್ ಶೆಟ್ಟರ್‌ರವರು ಎಸ್‌ಪಿಯವರೊಡನೆ ಮಾತನಾಡಿದ ನಂತರ, ಈಗ ಆ 200 ಜನರನ್ನು ಜ್ಞಾನಭಾರತಿ ಪೋಲೀಸ್ ಸ್ಟೇಷನ್‌ನಲ್ಲಿಟ್ಟಿದ್ದಾರೆ. ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ, ತಮ್ಮ ಕಷ್ಟ ಹೇಳಿಕೊಳ್ಳಲು ಬರುತ್ತಿರುವವರನ್ನು ಅವರ ಹಕ್ಕನ್ನು ಹತ್ತಿಕ್ಕಿ, ಹೀಗೆ ಮಾಡುತ್ತಿರುವುದು ಸರಿಯೇ? ಅವರು ಗೃಹ ಮಂತ್ರಿಗಳನ್ನು ಭೇಟಿ ಮಾಡಬೇಕೆಂದಿದ್ದರೂ ತಮ್ಮ ಮೂಲಕ ನಾನು ಗೃಹ ಮಂತ್ರಿಗಳ ಗಮನ ಸೆಳೆಯುತ್ತಿದ್ದೇನೆ. ಜ್ಞಾನಭಾರತಿ ಪೋಲೀಸ್ ಸ್ಟೇಷನ್‌ನಲ್ಲಿರುವ ರೈತರು ತಮ್ಮ ಸನ್ನಿಧಿಗೆ ಬರಲು, ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಕಷ್ಟ ಹೇಳಲು ಅವರಿಗೆ ಅವಕಾಶ ಮಾಡಿಕೊಡಬೇಕೆಂದು ನಾನು ತಮ್ಮ ಮೂಲಕ ಕೇಳುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು): ಬೆಂಗಳೂರಿಗೆ ರೈತರ ನಿಯೋಗ ಬರುತ್ತಿದೆ. ಅವರು ತಮ್ಮ ಕೆಲವು ಬೇಡಿಕೆಗಳನ್ನು ಮುಖ್ಯಮಂತ್ರಿಗಳಿಗೆ, ಸಂಬಂಧಪಟ್ಟ ಮಂತ್ರಿಗಳಿಗೆ ಹೇಳಲು ಬರುತ್ತಿದ್ದಾರೆ. ಅವರನ್ನು ತಡೆಹಿಡಿದು, ಪೋಲೀಸ್ ಸ್ಟೇಷನ್‌ನಲ್ಲಿಟ್ಟಿದ್ದಾರೆ. ಅವರು ಯಾವುದೇ ಕಾನೂನು ವಿರೋಧಿ ಕೆಲಸ ಮಾಡುತ್ತಿಲ್ಲ. ಅವರು ಬರಲು ಅವಕಾಶ ಕೊಡಬೇಕು. ಅವರ ಬೇಡಿಕೆಯನ್ನು ಈಡೇರಿಸುವುದು, ಬಿಡುವುದು ಸರ್ಕಾರಕ್ಕೆ ಬಿಟ್ಟಿದ್ದು. ಅವರನ್ನು ಪೋಲೀಸ್ ಸ್ಟೇಷನ್‌ನಲ್ಲಿ ಕೂಡಿ ಹಾಕಿದ್ದಾರೆ.

ಶ್ರೀ ಎ.ಆರ್.ಕೃಷ್ಣಮೂರ್ತಿ: ಇದು ಮಹದೇಶ್ವರ ಸಕ್ಕರೆ ಕಾರ್ಖಾನೆಗೆ ಸಂಬಂಧಪಟ್ಟ ವಿಚಾರ. ಮುಖ್ಯಮಂತ್ರಿಗಳು ಕಳೆದ ವಾರ ನಡೆದ ಹನೂರಿನ ಕಾರ್ಯಕ್ರಮಕ್ಕೆ ಬಂದ ಸಂದರ್ಭದಲ್ಲಿ ಅಲ್ಲಿನ ರೈತರು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಬಿನ್ನವಿಸಿಕೊಂಡ ವಿಚಾರದ ಹಿನ್ನೆಲೆಯಲ್ಲಿ ಇವತ್ತು ಬೆಂಗಳೂರಿಗೆ ಆ ಭಾಗದ ರೈತರು ಬಂದು ಮತ್ತೊಮ್ಮೆ